# ಸೆಲೆಬ್ರಿಟಿ

■ ಹನಿ

## ರಾಯಭಾರಿ ನಿರುಪಮಾ

ನಿರುಪಮಾ ಮೆನನ್ ರಾವ್ ಅಮೆರಿಕಕ್ಕೆ ಭಾರತದ ರಾಯಭಾರಿ ಆಗುವುದು ಖಚಿತವಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಆಗಸ್ಟ್ ಒಂದರಿಂದ ಅವರು 'ಅಮೆರಿಕ ಅಸೈನ್‌ಮೆಂಟ್' ಶುರು ಮಾಡಲಿದ್ದಾರೆ. 1973ರ ಐಎಫ್‌ಎಸ್ ಬ್ಯಾಚ್‌ನ ಈ ರಾಜತಂತ್ರಜ್ಞೆ, ಪುರುಷರ ಪ್ರಾಬಲ್ಯದ ರಾಜತಾಂತ್ರಿಕ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದಾಕೆ. ಸದ್ಯಕ್ಕೆ ಭಾರತದ ವಿದೇಶಾಂಗ ಕಾರ್ಯದರ್ಶಿಯಾಗಿರುವ ನಿರುಪಮಾ, ಜುಲೈ 31ರಂದು ಆ ಹುದ್ದೆಯಿಂದ ನಿವೃತ್ತರಾಗಲಿದ್ದು ಹೊಸ ರಾಜಕೀಯ ಕೆಲಸಕ್ಕೆ ಸಜ್ಜಾಗಿದ್ದಾರೆ.



ಕೇರಳ ಮೂಲದ ನಿರುಪಮಾ, ಬೆಂಗಳೂರಿನ ಮೌಂಟ್ ಕಾರ್ಮೆಲ್‌ನಲ್ಲಿ ಬಿಎ ಇಂಗ್ಲಿಷ್ ಪದವಿ (1970) ಓದಿದವರು. ಆಗದು ಮೈಸೂರು ವಿ.ವಿ ಗೆ ಒಳಪಟ್ಟಿತ್ತು. ಮಲಪ್ಪುರಂನಲ್ಲಿ ಹುಟ್ಟಿದ ಅವರ (ಬರ್ತ್‌ಡೇ 6-12-1950) ತಂದೆ ಮಿಲಿಟರಿಯಲ್ಲಿ ಅಧಿಕಾರಿಯಾಗಿದ್ದರು. ಮೀಂಪಾಡ್ ತರವಾಡ್‌ನದ್ದು ಪ್ರತಿಷ್ಠಿತ ಹಿನ್ನೆಲೆ. ಮೂವರು ಸೋದರಿಯಲ್ಲಿ ಈಕೆಯೇ ದೊಡ್ಡವಳು. ಸ್ವಾತಂತ್ರ್ಯಪೂರ್ವದಲ್ಲೇ ಪದವಿ ವಿದ್ಯಾಭ್ಯಾಸ ಮಾಡಿದ ಕೆಲವೇ ಮಂದಿಯಲ್ಲಿ ನಿರುಪಮಾ ತಾಯಿಯೂ ಒಬ್ಬರು. ತಂದೆ ಮಿಲಿಟರಿಯಲ್ಲಿ ವರ್ಗಾ ಆಗುತ್ತಿದ್ದುದರಿಂದ ಬೆಂಗಳೂರು, ಪುಣೆ, ಲಖನೌ, ಕೂನೂರು ಹೀಗೆ ಕುಟುಂಬದ ತಿರುಗಾಟದ ಜತೆಗೇ ನಿರುಪಮಾ ವಿದ್ಯಾಭ್ಯಾಸ ಮುಂದುವರಿಯಿತು. ಬಳಿಕ ಮರಾಠಾವಾಡ ವಿ.ವಿಯಿಂದ ಇಂಗ್ಲಿಷ್ ಸಾಹಿತ್ಯದ ಎಂ.ಎ. ಇತಿಹಾಸದ ಕುರಿತು ಮಗಳಿಗಿದ್ದ ಆಸಕ್ತಿಯನ್ನು ಗುರುತಿಸಿದ ತಂದೆ ಆ ನಿಟ್ಟಿನಲ್ಲೇ ವಿದ್ಯಾಭ್ಯಾಸ ಮುಂದುವರಿಸಲು ಪ್ರೋತ್ಸಾಹ ನೀಡಿದರು. 1992-93ರಲ್ಲಿ ಹಾರ್ವರ್ಡ್ ವಿ.ವಿ ಯ ವೆದರ್‌ಲ್ಯಾಂಡ್ ಸೆಂಟರ್ ಫಾರ್ ಇಂಟರ್‌ನ್ಯಾಷನಲ್ ಅಫೇರ್ಸ್ ಸಂಸ್ಥೆಯ ಫೆಲೊ ಆಗಿ ಅಧ್ಯಯನ. ಈಗ ಏಷ್ಯಾ- ಪೆಸಿಫಿಕ್ ಭದ್ರತೆಯ ವಿಚಾರಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ತಜ್ಞೆ ನಿರುಪಮಾ.

ವಿದೇಶ ಸೇವೆ ನಿರುಪಮಾಗೆ ಹೊಸತಲ್ಲ. ಹಿಂದೆ ಅಮೆರಿಕದಲ್ಲಿ ಜೂನಿಯರ್ ಡಿಪ್ಲೊಮ್ಯಾಟ್ ಆಗಿ ಕೆಲಸ ಮಾಡಿದ್ದರು. ಚೀನಾ, ಶ್ರೀಲಂಕಾಗಳಲ್ಲೂ ವಿದೇಶಾಂಗ ವಿಭಾಗದಲ್ಲಿ ಕೆಲಸ ಮಾಡಿದ ಅನುಭವವಿದೆ. ಸಮತೂಕದ ಮಾತು, ಸಮಚಿತ್ತದ ಕಾರ್ಯ ನಿರ್ವಹಣೆ- ನಿರುಪಮಾಗೆ ವೃತ್ತಿಯಲ್ಲಿ ಯಶಸ್ಸು ತಂದುಕೊಟ್ಟ ಗುಣಗಳು. ಅಮೆರಿಕ ಮತ್ತು ಭಾರತದ ನಡುವಣ ಸಂಬಂಧ ಅತ್ಯಂತ ಮಹತ್ವದ ಘಟ್ಟವನ್ನು ತಲುಪಿರುವ ಸಂದರ್ಭದಲ್ಲಿ ನಿರುಪಮಾ ಅಲ್ಲಿಗೆ ತೆರಳುತ್ತಿರುವುದು ಕುತೂಹಲಕರ.

ಅಂದ ಹಾಗೆ ನಿರುಪಮಾ ಕವಯತ್ರಿಯೂ ಹೌದು. ರೈನ್ ರೈಸಿಂಗ್ ಎಂಬ ಕವನ ಸಂಕಲನ ಪ್ರಕಟವಾಗಿದೆ. ಈ ಕವಿತೆಗಳು ಚೀನಾ ಮತ್ತು ರಷ್ಯನ್ ಭಾಷೆಗಳಿಗೂ ಅನುವಾದಗೊಂಡಿವೆ.




## ಯುವರಾಜ ಏಕಿಲ್ಲ?

ವೆಸ್ಟ್ ಇಂಡೀಸ್ ಪ್ರವಾಸ ಮಾಡುತ್ತಿರುವ ಭಾರತೀಯ ಕ್ರಿಕೆಟ್ ತಂಡದಲ್ಲಿ ಯುವರಾಜ್ ಸಿಂಗ್ ಏಕಿಲ್ಲ? ನಿಜಕ್ಕೂ ಅನಾರೋಗ್ಯದ ಕಾರಣದಿಂದಲೇ ಅವರು ಹಿಂದೆ ಸರಿದಿದ್ದಾರೆಯೆ.. ಅಥವಾ ತನಗಿಂತ ಕಿರಿಯನ ನಾಯಕತ್ವದಲ್ಲಿ ಆಡಲು ಅವರಿಗೆ ಮನಸ್ಸಿಲ್ಲದೆ ಅನಾರೋಗ್ಯದ ನೆಪ ಒಡ್ಡಿದ್ದಾರೆಯೆ? ಒಂದು ದಿನದ ತಂಡಕ್ಕೆ ಸುರೇಶ್ ರೈನಾ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಿದ್ದರಿಂದ ಯುವರಾಜ್ ಸಿಟ್ಟಿಗೆದ್ದಿದ್ದಾರೆಯೆ?- ಇವು ಇದೀಗ ಕ್ರಿಕೆಟ್ ಪ್ರಿಯರನ್ನು ಕಾಡುತ್ತಿರುವ ಪ್ರಶ್ನೆಗಳು.

ಯುವರಾಜ್ ಸಿಂಗ್ ಮಾತ್ರ ಈ ಪ್ರಶ್ನೆಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ತಮ್ಮ ಎಂದಿನ ಗುಡುಗು ಮಿಂಚಿನ ಶೈಲಿಯಲ್ಲೇ ಟೀಕೆಗಳಿಗೆ ಉತ್ತರಿಸಿರುವ ಅವರು, 'ನಾನು ಆಡೋದು ದೇಶಕ್ಕಾಗಿ ಮತ್ತು ತಂಡಕ್ಕಾಗಿ; ನಾಯಕನಿಗಾಗಿ ಅಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯನ್ನು ನಂಬಲು ಅಭಿಮಾನಿಗಳು ತಯಾರಿಲ್ಲ. 'ಸುರೇಶ ರೈನಾ ಮಾತ್ರ ಕಿರಿಯರಲ್ಲ; ಮಹೇಂದ್ರಸಿಂಗ್ ದೋನಿ, ಗೌತಮ್ ಗಂಭೀರ್ ಕೂಡಾ ಭಾರತ ತಂಡದಲ್ಲಿ ನನಗಿಂತ ಕಿರಿಯರು. ಅವರ ನಾಯಕತ್ವದಲ್ಲಿ ನಾನು ಆಡಿಲ್ಲವೆ?' ಎನ್ನುವುದು ಯುವರಾಜ್ ಸಿಂಗ್‌ರ ತರ್ಕಬದ್ಧ ಮರುಪ್ರಶ್ನೆ.

19ರ ಕೆಳಗಿನವರ ತಂಡದ ಕ್ರಿಕೆಟ್ ಪಂದ್ಯದಲ್ಲಿ ಬಿಹಾರ ವಿರುದ್ಧ 358 ರನ್ ಹೊಡೆದು ಗಮನ ಸೆಳೆದ ಯುವರಾಜ್ ಭಾರತದ ಏಕದಿನ ಕ್ರಿಕೆಟ್ ತಂಡಕ್ಕೆ ಪ್ರವೇಶಿಸಿ (2000) ಆಗಲೇ 11 ವರ್ಷಗಳಾಗಿವೆ. 2003ರಲ್ಲಿ ಅವರು ಟೆಸ್ಟ್ ತಂಡಕ್ಕೆ ಬಂದರು. 2007-08ರಲ್ಲಿ ಏಕದಿನ ತಂಡದ ಉಪನಾಯಕರೂ ಆಗಿದ್ದರು. 2007ರ 'ಟ್ವೆಂಟಿ 20 ' ವಿಶ್ವಕಪ್‌ನಲ್ಲಿ 6 ಚೆಂಡುಗಳಲ್ಲಿ 6 ಸಿಕ್ಸರ್ ಹೊಡೆದು ಪ್ರೇಕ್ಷಕರನ್ನು ನಿಬ್ಬೆರಗಾಗಿಸಿದ ಯುವರಾಜ್, 2011ರ ಕ್ರಿಕೆಟ್ ವಿಶ್ವಕಪ್‌ನಲ್ಲಿ ಸರ್ವಾಂಗೀಣ ಆಟ ಪ್ರದರ್ಶಿಸಿ 'ಮ್ಯಾನ್ ಆಫ್ ದಿ ಟೂರ್ನಿ' ಪ್ರಶಸ್ತಿ ಗೆದ್ದವರು. ಭಾರತದ ಏಕದಿನ ಕ್ರಿಕೆಟ್ ತಂಡಕ್ಕೆ ನಾಯಕನಾಗುವ ಎಲ್ಲ ಅರ್ಹತೆಗಳೂ ಅವರಲ್ಲಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಗಿದ್ದೂ ರೈನಾ ಆಯ್ಕೆ ಆದದ್ದು ಯುವರಾಜ್‌ಗೆ ನೋವುಂಟು ಮಾಡಿದ್ದರೆ ಅದಕ್ಕೆ ಸಕಾರಣಗಳಿವೆ. ಹಾಗಾಗಿಯೇ ಅಭಿಮಾನಿಗಳು ಯುವರಾಜ್‌ರ ಅನಾರೋಗ್ಯದ ಕಾರಣವನ್ನು ನಂಬುತ್ತಿಲ್ಲ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65